ಎಂದೆ? ಹತ್ತು ಗಂಟೆಯ ಬಸ್ ನಿಲ್ಲಿಸಿಯೇ ಎಷ್ಟೋ ವರ್ಷಗಳಾದವು. ಈಗ ನೀನು ಬೆಳೆದ ಊರು ಬದಲಾಗಿದೆ. ಕಾಲಮಾನವೂ ಬದಲಾಗಿದೆ. ಹಾಗೆ 10ಗಂಟೆಯ ಬಸ್ಸಿನ ಬದಲಾಗಿ ಈಗ 9 ಗಂಟೆಯ ಬಸ್ಸು ಬರುತ್ತಿದೆ ಎಂದ. ಅದು ಈಗ ಸಹಜವಾಗಿ ಸಮಯಕ್ಕೆ ಹೊಂದಿಕೊಂಡ ಊರಾಯಿತು. ಕಟ್ ಸರ್ವಿಸ್ ಬಸ್ಸಿನ ಬದಲಾಗಿ ಹಡಗಲಿಯಿಂದ ಗೋವಿನಪುರ ತಾಂಡಕ್ಕೆ ಹೋಗಿ ಮತ್ತೆ ಮುದೇನೂರಿಗೆ ಬಂದು ಹಡಗಲಿ ಸೇರುವ ಬಸ್ಸದು.

ಈಗಿನ ಮಕ್ಕಳು, ಮತ್ತು ಆಗ ಹಳೆಯ ತಲೆಮಾರಿನ ಹತ್ತು ಗಂಟೆಯ ಬಸ್ಸಿಗೆ ಓಡಾಡಿದ ಹಿರಿಯರು ಇದೇ 9 ಗಂಟೆ ಬಸ್ಸಿನಲ್ಲಿ ಓಡಾಡಬೇಕು. ಹಡಗಲಿಯ ಹಳೇ ಸಂತೆ ಮರೆಯಾಗಿ ಈಗ ಹೊಸ ಸಂತೆ ಮೈಲಾರನ ರೋಡಿಗೆ ಚಾಚಿಕೊಂಡಿದೆ. ಆ ಸಂತೆಯ ದಾಣಿ ಉಂಡೆ, ಚುರುಮುರಿ ಮಂಡಕ್ಕಿ, ಸಂತೆಯ ಭಜಿ, ಮಿರ್ಚಿ, ಪೇರಲ ಹಣ್ಣಿಗಾಗಿ ನಮ್ಮೂರಿನ ರೋಡಿನಲ್ಲಿ ಕುಳಿತು ಬಕ ಪಕ್ಷಿಯಂತೆ ಕಾಯುತ್ತಿದ್ದೆವಲ್ಲ ಶಿವನೇ... ಸಂತೆ ಮಾಡಿಕೊಂಡು ಉಟ್ಟ ಪಂಚೆಯ ಗಂಟಿನಲ್ಲಿ,ಅವ್ವ ಸೀರೆ ಸೆರಗಂಟಿನಲ್ಲಿ ಹುಂಡಿ, ಪ್ಯಾರಲಹಣ್ಣು ಕಟ್ಟಿಕೊಂಡು ಈ ಬಸ್ಸಿಳಿದು ಬಂದರೆ ಅದೇ ಸ್ವರ್ಗ ನಮಗೆ. ಇಂತಹ ಬಾಲ್ಯವನ್ನೇ ನಮ್ಮ ಹತ್ತು ಗಂಟೆ ಬಸ್ಸು ನೆನಪಿಸುತ್ತದೆ.

ಈಗಂತೂ ಅರ್ಧಗಂಟೆಗೊಮ್ಮೆ ಯಾವ ಬಸ್ಸು ಬರದೇ ಇದ್ದರೂ ಟೆಂಪೋಗಳು ಬರುತ್ತಿವೆ. ಯಾಕೆಂದರೆ, ನಮ್ಮೂರಿನ ಮಕ್ಕಳು ಈಗ ಸರಕಾರಿ ಮತ್ತು ಖಾಸಗಿ ಸಿಬಿಎಸ್‌ಇಯಂತಹ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಇಂಗ್ಲಿಷ್ ಮೀಡಿಯಂ ಓದುವ ಹೊಸ ಮಕ್ಕಳಿಗೆ ಸರಿಯಾದ ಸಮಯಕ್ಕೆ ಬಸ್ಸು ಬರಬೇಕು ಮತ್ತು ಸರಿಯಾದ ಸಮಯಕ್ಕೆ ಸ್ಕೂಲಿನಲ್ಲಿ ಹಾಜರಿರಬೇಕು. ಇದು ಅವರ ಕಾಯಕ. ನಮ್ಮ ಕಾಯಕ ಆಗ ಹೀಗಿನಂತೆ ಶುದ್ಧವಿರುತ್ತಿರಲಿಲ್ಲ. ಶಾಲೆಗೆ ಹೋದವರು ಮೇಷ್ಟ್ರು ಪಾಠ ಕೇಳುತ್ತಲೇ ಪಾಟಿಚೀಲ ತಲೆದಿಂಬಾಗಿಟ್ಟುಕೊಂಡು ಅಲ್ಲಿಯೇ ಮಲಗಿ ಬಿಡುತ್ತಿದ್ದೆವು ನಾವು. ನಮ್ಮನ್ನು ಎಬ್ಬಿಸಿಯೇ ಮೇಷ್ಟ್ರು ಪಾಠ ಮಾಡಬೇಕು. ತೊಗರಿ ಜುಳ್ಳಿಯಿಂದಲೋ, ಬೆತ್ತದಿಂದಲೋ ಹೊಡೆದ ಮೇಲೆಯೇ ನಮಗೆ ಎಚ್ಚರ. ಅಂತಹ ಸರಕಾರಿ ಕಿರಿಯ ಮಾದರಿಯ ಶಾಲೆಯಲ್ಲಿ ಓದಿ ಬೆಳೆದ ಮಕ್ಕಳು ನಾವು. ನಮಗೆ ಯಾರ ಹಂಗಿಲ್ಲ. ನಾವೇ ಹೀರೋಗಳು ಆಗ. ಶಾಲೆಯವರೇ ಕೊಟ್ಟ ಖಾಕೀ ಚೊಣ್ಣ, ಬಿಳೀ ಅಂಗಿ ತಲೆಮೇಲೆ ಟೊಪ್ಪಿಗೆ ಸಾಕ್ಷಾತ್ ಸ್ವಾತಂತ್ರ್ಯದ ಮರಿ ಸೇನಾನಿಗಳಂತೆಯೋ, ಸುಭಾಷ್ ಚಂದ್ರ ಭೋಸ್‌ರಂತೆಯೋ ಎದೆಯುಬ್ಬಿಸಿ ನಡೆಯುತ್ತಿದ್ದೆವು.

ನಾವು ನೋಡಿರದ ಹಿಮಾಲಯದ ಎವರೆಸ್ಟ್ ಗೌರಿಶಿಖರ ನಮ್ಮೂರಿನ ಕೆರೆ ಅಂಗಳದಲ್ಲಿಯೇ ಇತ್ತಲ್ಲವೇ. ಅದನ್ನು ಏರಿ ಕುಳಿತು ಹನುಮಪ್ಪನ ಪಾದ ಮುಟ್ಟಿದರೆ ಗೌರಿ ಶಿಖರದ ತುದಿ ಮುಟ್ಟಿದಂತೆ. ಸುತ್ತಲೂ ಕೆರೆಯ ನೀರು. ಮೇಲೆ ಹನುಮಪ್ಪನ ಪಾದ. ಆಹಾ ಎಂಥ ಸವಿಯಾದ ಅನುಭವ. ಪಕ್ಕದಲ್ಲೇ ಚೌಡಮ್ಮ. ದೂರದಲ್ಲಿ ಮರಡಿ ಚನ್ನಬಸವಣ್ಣ, ಆ ನಮ್ಮೂರು ಪಕ್ಕದ ನಂದಿಹಳ್ಳಿಯನ್ನು ಬೆಸೆದಿದ್ದ ಆ ಬಾರೀಗಿಡ ಮೈತುಂಬಿ ಹಣ್ಣು ಬಿಟ್ಟ ಚೆಲುವಿನ ಸವಿನೆನಪು. ನಾವು ಎಷ್ಟೋ ಬಾರಿ ಆ ಕಲ್ಲು ಬಂಡೆಯ ಮೇಲೆ ಕುಳಿತಾಗಲೇ ಹತ್ತು ಗಂಟೆಯ ಬಸ್ಸು ನಮ್ಮ ಕಣ್ಣ ಮುಂದೆ ಹಾದು ಹೋಗುತ್ತಿತ್ತು. ದೂರದಿಂದಲೇ ಡ್ರೈವರಣ್ಣಗೆ, ಬಸ್ ಕಂಡಕ್ಟರ್ ಅಣ್ಣಗೆ, ಕಿಟಕಿಯ ಗಾಜಿನ ಹತ್ತಿರ ಕುಳಿತು ನಮ್ಮತ್ತ ನೋಡುವವರಂತೆ ಕುಳಿತಿದ್ದ ಜನರಿಗೆ ಕೈಬೀಸಿ ಟಾಟಾ ಮಾಡುತ್ತಿದ್ದೆವು. ಅವರೂ ಕೈಬೀಸಿ ನಮಗೆ ಟಾಟಾ ಮಾಡುತ್ತಿದ್ದರು.

ಆಗ ನಮ್ಮ ಬಾಲ್ಯವನ್ನು ಅರಳಿಸಿದ್ದ, ನಮ್ಮ ಬಾಲ್ಯವನ್ನು ಬೆರಗಾಗಿಸಿದ್ದ ಆ ಹತ್ತು ಗಂಟೆಯ ಬಸ್ಸು ಈಗ ಬರೀ ಬೆಚ್ಚನೆಯ ಹಿತವಾದ ಒಂದು ನೆನಪು ಮಾತ್ರ. ಆದರೆ, ಕಣ್ಣ ಮುಂದೆ, ಮನದ ಮುಂದೆ, ಸ್ಮೃತಿಪಟಲದ ಮುಂದೆ ಹೀಗೆ ಹಾದು ಹೋಗುವಾಗ ನನ್ನೂರು, ನನ್ನೂರಿನ ಒಡಲ ಆ ಚಿತ್ರಗಳು ಮೂಡಿ ನಿಂತು ಕಣ್ಣು ಒದ್ದೆಯಾಗಿಬಿಡುತ್ತದೆ. ಅಂಥದ್ದೊಂದು ಭಾವುಕವಾದ ಲೋಕ ಪ್ರಪಂಚ ನನ್ನ ಹತ್ತುಗಂಟೆಯ ಬಸ್ಸಿನದು.

ನಾವು ದೂರದಲ್ಲಿ ಎಲ್ಲೇ ಬದುಕಿರಲಿ, ಆದರೆ ಆ ಹತ್ತು ಗಂಟೆಯ ಬಸ್ಸು, ನನ್ನೂರು, ನನ್ನೂರ ಕೆರೆ, ನನ್ನೂರ ಶಾಲೆ, ನನ್ನೂರ ಗೌರಿಶಂಕರ ಎಲ್ಲವೂ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದೆ. ಇಂತಹ ಬಾಲ್ಯವನ್ನು ಕಟ್ಟಿಕೊಟ್ಟ ನನ್ನೂರಿಗೆ, ನನ್ನೂರಿನ ಆ ಹತ್ತು ಗಂಟೆ ಬಸ್ಸಿಗೆ ನನ್ನ ಸಾವಿರದ ಶರಣು ಹೇಳುವೆ.

●